ವಿ.ಸೋಮಣ್ಣಗೆ ಜಿಲ್ಲಾ ಬಿಜೆಪಿ ಉಸ್ತುವಾರಿ

ಹಿಂದಿದೆ ಅವರ ಸ್ಪರ್ಧೆ ತಯಾರಿ!; ಜಿಲ್ಲೆಯಲ್ಲಿ ಕಣಕ್ಕಿಳಿಯುವುದು ಬಹುತೇಕ ಖಚಿತ

ಮಾತಿನಲ್ಲಿ ಸ್ಪಷ್ಟತೆ ಇಲ್ಲದ ವಿ.ಸೋಮಣ್ಣ ಅವರು ಚಾಮರಾಜನಗರ ಅಥವಾ ಗುಂಡ್ಲುಪೇಟೆ ಕ್ಷೇತ್ರದಿಂದ ಸ್ಪರ್ಧೆಗಿಳಿಯುವಂತೆ ತಮ್ಮ ಹಿಂಬಾಲಕರ ಮೂಲಕ ಹಿಂದಿನ ಚುನಾವಣಾ ಕಾಲಘಟ್ಟದಲ್ಲಿಯೇ ಬಾಯಿಬಿಡಿಸಿದ್ದೂ ಇದೆ. ಇಂತಹ ಗಲಿಬಿಲಿ ಜಿಲ್ಲೆಯಲ್ಲಿ ಸೋಮಣ್ಣ ಅವರ 'ಪ್ರವೇಶ'ದೊಂದಿಗೆ ಮತ್ತೆ ಮುನ್ನೆಲೆಗೆ ಬರಲೂಬಹುದು.

ಚಾಮರಾಜನಗರ,ಸೆ.೧೨– ಮಾಜಿ ಸಚಿವ ವಿ.ಸೋಮಣ್ಣ ಅವರಿಗೆ ಭಾರತೀಯ ಜನತಾಪಕ್ಷದ ಜಿಲ್ಲಾ ಉಸ್ತುವಾರಿಯನ್ನು ಮತ್ತೆ ವಹಿಸಲಾಗಿದೆ. ಇದರೊಂದಿಗೆ ಬರಲಿರುವ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ ಹನೂರು ಕ್ಷೇತ್ರದಿಂದ ಸ್ಪರ್ಧಿಸುವ ಅವರ ಇರಾದೆ–ಬಯಕೆಯೂ ಮುನ್ನೆಲೆಗೆ ಬಂದಿದೆ.

ಪ್ರಹ್ಲಾದ್ ಜೋಷಿ ಅವರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿದ್ದಾಗ ಸೋಮಣ್ಣ ಅವರಿಗೆ ಜಿಲ್ಲೆಯ ಉಸ್ತುವಾರಿ ವಹಿಸಲಾಗಿತ್ತು. ಬಿ.ಎಸ್.ಯಡಿಯೂರಪ್ಪ ಅವರು ರಾಜ್ಯಾಧ್ಯಕ್ಷರಾಗುತ್ತಿದ್ದಂತೆ ಜಿಲ್ಲೆಯ ಉಸ್ತುವಾರಿ ಮಾಜಿ ಸಚಿವ ಬಿ.ಶ್ರೀರಾಮುಲು ಪಾಲಾಗಿತ್ತು. ಬಿಎಸ್‌ವೈ ಮತ್ತು ಸೋಮಣ್ಣ ಸಂಬಂಧ ಆಗ ಹಳಸಿತ್ತು, ಹಾಗಾಗಿ ಉಸ್ತುವಾರಿ ಕಿತ್ತುಕೊಳ್ಳಲಾಗಿತ್ತು!

ಬದಲಾದ ಸನ್ನಿವೇಶದಲ್ಲಿ ಯಡಿಯೂರಪ್ಪ ಅವರು ವಿ.ಸೋಮಣ್ಣ ಅವರ ನಿವಾಸಕ್ಕೆ ಉಪಾಹಾರಕ್ಕೆ ಹೋಗಿದ್ದು ಸುದ್ದಿಯಾಗಿತ್ತು. ಅವರ ಈ ಭೇಟಿ ಭಿನ್ನಾಭಿಪ್ರಾಯ ದೂರವಾದ ಸೂಚಕದಂತಿತ್ತು. ಇದಲ್ಲದೆ ದಲಿತರ ಕೇರಿಗೆ ಹೋಗಿ ಅವರ ಸಮಸ್ಯೆ ಆಲಿಸುವ–ಅವರ ಮನೆಯಲ್ಲಿ ಊಟ, ಉಪಾಹಾರ ಸೇವಿಸುವ ಕಾರ್ಯಕ್ರಮ ನಿಮಿತ್ತ ಚಾಮರಾಜನಗರಕ್ಕೆ ಆಗಮಿಸಿದ್ದ ಯಡಿಯೂರಪ್ಪ ಜೊತೆ ಸೋಮಣ್ಣ ಅವರೂ ಭಾಗಿಯಾಗಿದ್ದರು. ಸೋಮಣ್ಣ ಅವರಿಗೆ ಜಿಲ್ಲೆಯ ಜವಾಬ್ದಾರಿ ವಹಿಸುವುದಾಗಿ ಆ ಭೇಟಿ ವೇಳೆಯಲ್ಲೇ ಬಿಎಸ್‌ವೈ ಸುದ್ದಿಗಾರರಿಗೆ ತಿಳಿಸಿದ್ದರು.

ಅಂತೆಯೇ ಸೋಮಣ್ಣ ಅವರ ಹೆಗಲಿಗೆ ಜಿಲ್ಲೆಯ ಜವಾಬ್ದಾರಿ ಈಗ ಏರಿದೆ. ಪಕ್ಷದ ಜಿಲ್ಲಾಧ್ಯಕ್ಷರಾದ ವಿಧಾನ ಪರಿಷತ್ ಮಾಜಿ ಸದಸ್ಯ ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ ಮತ್ತು ಸೋಮಣ್ಣ ಅವರ ಬಾಂಧವ್ಯವೂ ಚೆನ್ನಾಗಿರಲಿಲ್ಲ. ಸಭೆ, ಸಮಾರಂಭಗಳಲ್ಲಿ ಇಬ್ಬರೂ ಬಿಗುಮಾನದಿಂದಲೇ ಇರುತ್ತಿದ್ದರು. ಈ ಮೂಲಕ ಈರ್ವರ ನಡುವಿನ ಮುನಿಸು ಎದ್ದು ಕಾಣುತ್ತಿತ್ತು.

ಯಾವಾಗ ತಮ್ಮ ರಾಜಕೀಯ ಗುರು ಯಡಿಯೂರಪ್ಪ ಅವರು ಸೋಮಣ್ಣ ಅವರನ್ನು ನಂಜನಗೂಡು ಉಪ ಚುನಾವಣೆ ಸಂದರ್ಭದಲ್ಲಿ ಹತ್ತಿರ ಬಿಟ್ಟುಕೊಂಡರೋ ಆವಾಗಿನಿಂದ ಮಲ್ಲಿಕಾರ್ಜುನಪ್ಪ ಅವರೂ ತಣ್ಣಗಾಗಿದ್ದಾರೆ. ಬಿಎಸ್‌ವೈ ಜೊತೆ ಸೋಮಣ್ಣ ಅವರಿಗೆ ಭಿನ್ನಾಭಿಪ್ರಾಯ ಇದ್ದ ಕಾರಣದಿಂದಲೇ ಮಲ್ಲಿಕಾರ್ಜುನಪ್ಪ ಅವರು ಸೋಮಣ್ಣ ಜೊತೆ ಸಹ್ಯವಾಗಿ ಇರಲಿಲ್ಲ ಎನ್ನಲಾಗುತ್ತಿದೆ.

ಹನೂರು ಕ್ಷೇತ್ರದಿಂದ ಸ್ಪರ್ಧೆ ಮಾಡುವುದಾಗಿ ಸೋಮಣ್ಣ ಈ ನಡುವೆ ಅನೇಕ ಬಾರಿ ಹೇಳಿದ್ದಾರೆ. ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿಯೂ ಹನೂರು ಕ್ಷೇತ್ರದ ಹೆಸರನ್ನು ತೂರಿಬಿಟ್ಟಿದ್ದರು. ಕೊನೆಗೆ ಬೆಂಗಳೂರಿನ ಅವರ ಸ್ವಕ್ಷೇತ್ರ ಗೋವಿಂದರಾಜನಗರದಿಂದಲೇ ಸ್ಪರ್ಧಿಸಿ ಪರಾಜಿತರಾದರು.

ಮಾಜಿ ಶಾಸಕಿ ಪರಿಮಳಾ ನಾಗಪ್ಪ ಅವರು ಪುನಃ ಬಿಜೆಪಿಗೆ ಜಿಗಿದಿರುವುದು ಸ್ವಕ್ಷೇತ್ರ ಹನೂರಿನಿಂದ ಸ್ಪರ್ಧಿಸುವ ಉದ್ದೇಶದಿಂದಲೇ. ಪರಿಮಳಾ ಅವರು ಬಿಜೆಪಿ ಬಂದ ನಂತರವೂ ಸ್ಪರ್ಧೆ ವಿಚಾರವಾಗಿ ಸುದ್ದಿಗಾರರು ಪ್ರಶ್ನಿಸಿದಾಗ ಆಡಿದ ಮಾತಿಗೆ ಬದ್ಧರಾಗಿರುವುದಾಗಿ ಅರ್ಥಾತ್ ಹನೂರಿನಿಂದ ಸ್ಪರ್ಧಿಸುವುದಾಗಿ ಸೋಮಣ್ಣ ಅವರು ಉಸುರಿದ್ದಾರೆ!

ಈ ಮಧ್ಯೆ ಸೋಮಣ್ಣ ಸೋದರ ಸಂಬಂಧಿ ರಾಜೇಂದ್ರ ಕುಮಾರ್ ಅವರೂ ಬಹುದಿನಗಳಿಂದ ಹನೂರು ಕ್ಷೇತ್ರದ ಪ್ರಬಲ ಆಕಾಂಕ್ಷಿಯಾಗಿ ಕ್ಷೇತ್ರ ಪರ್ಯಟನೆ ಮಾಡುತ್ತಿದ್ದು ಇದರ ಹಿಂದೆ ಯಾರಿದ್ದಾರೆ? ಇದರ ತಂತ್ರ–ಮರ್ಮ ಏನು ? ಎಂಬುದನ್ನು ತಿಳಿ ಯಲು ಹೆಚ್ಚುದಿನಗಳು ಬೇಕಾಗಲಾರದು ಎನಿಸುತ್ತದೆ.

ಕಾಂಗ್ರೆಸ್ಸಿನಲ್ಲಿ ಇದ್ದಾಗಿನಿಂದಲೂ ಸೋಮಣ್ಣ ಅವರಿಗೆ ಜಿಲ್ಲೆಯ ನಾಡಿಮಿಡಿತ ಗೊತ್ತಿದೆ. ಒಮ್ಮೆ ಕಾಂಗ್ರೆಸ್ ಪಕ್ಷದ ಜಿಲ್ಲಾ ಉಸ್ತುವಾರಿಯನ್ನು ಅವರು ಹೊಂದಿದ್ದರು. ಇದೀಗ ೨ನೇ ಬಾರಿಗೆ ಬಿಜೆಪಿ ಹೊಣೆ ಹೊತ್ತಿರುವ ಅವರಿಗೆ ಜಿಲ್ಲೆಯ ಕಾಂಗ್ರೆಸ್, ಬಿಜೆಪಿ ರಾಜಕೀಯದ ಪಟ್ಟುಗಳ ಅರಿವಿದೆ.

ಇದನ್ನರಿತು ಮತ್ತು ಅವರು ಆರ್ಥಿಕವಾಗಿ ಯಾವಾಗಲೂ ಚಲಾವಣೆಯಲ್ಲಿ ಇರುವುದರಿಂದ ಹೋದ ಕಡೆಯಲ್ಲೆಲ್ಲಾ ಜನರನ್ನು, ಮುಖಂಡರನ್ನು ಸೆಳೆಯಬಲ್ಲವರು ಎಂಬುದನ್ನು ತಿಳಿದು ಜವಾಬ್ದಾರಿ ವಹಿಸಲಾಗಿದೆ.

ಅವರು ಜಿಲ್ಲೆಯ ಹೊಣೆ ಹೊತ್ತಿರುವುದರ ಹಿಂದೆ ಈ ಜಿಲ್ಲೆಯಿಂದಲೇ ಸ್ಪರ್ಧೆಗಿಳಿಯುವುದು ನೂರಕ್ಕೆ (ಹ)ನೂರು ಸತ್ಯ ಎನ್ನುತ್ತಾರೆ ಅವರನ್ನು ಹತ್ತಿರದಿಂದ ಬಲ್ಲವರು. ಕಾದು ನೋಡೋಣ.

ಮೊದಲನೇ ಪುಟದಿಂದ

ವೀರಶೈವ–ಲಿಂಗಾಯತ ಒಂದೇ

ಮಠದ ಅಂತಿಮ ತೀರ್ಮಾನ: ಲಿಂಗಾಯತ– ವೀರಶೈವ ಎರಡೂ ಪದಗಳೂ ಒಂದೇ. ಗ್ರಾಮೀಣ ಭಾಗದಲ್ಲಿ ಲಿಂಗಾಯತ ಎನ್ನುತ್ತಾರೆ, ನಗರ ಪ್ರದೇಶದಲ್ಲಿ ಹಾಗೂ ವಿದ್ಯಾವಂತರು ವೀರಶೈವ ಎನ್ನುತ್ತಾರೆ ಅಷ್ಟೆ. ಎರಡೂ ಪ್ರತ್ಯೇಕ ಎಂದು ಪ್ರತಿಪಾದಿಸುತ್ತಿರುವ ಬಣಗಳು ಪರಸ್ಪರ ಚರ್ಚಿಸಿ ಒಮ್ಮತದ ನಿರ್ಧಾರ ಕೈಗೊಳ್ಳಬೇಕು. ಎಂ.ಬಿ.ಪಾಟೀಲ್ ಅವರ ಹೇಳಿಕೆ ದುರದೃಷ್ಟಕರ ಹಾಗೂ ಅಪ್ರಸ್ತುತ. ವೀರಶೈವ ಪದ ಬಿಟ್ಟು ಲಿಂಗಾಯತ ಧರ್ಮ ಎಂಬುದಕ್ಕೆ ಬೆಂಬಲ ನೀಡಿಲ್ಲ. ಸಮಾಜ ಒಡೆಯುವ ಕೆಲಸ ಒಳ್ಳೆಯದಲ್ಲ. ಆದ್ದರಿಂದ ಸಮಾಜದ ಮುಖಂಡರು ಕುಳಿತು ಒಮ್ಮತಕ್ಕೆ ಬರುವುದು ಅಗತ್ಯ. ಜತೆಗೆ ಇದನ್ನೇ ಮಠದ ಅಂತಿಮ ತೀರ್ಮಾನ ಎಂದು ತಿಳಿದುಕೊಳ್ಳಬೇಕು. ಈ ವಿಚಾರದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದ ನಿರ್ಣಯ ಅಂತಿಮ ಎಂದು ಶ್ರೀ ಶಿವಕುಮಾರ ಸ್ವಾಮೀಜಿ ಅವರ ಸಹಿ ಇರುವ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ಮಧ್ಯೆ ಮಠ ಮತ್ತೊಂದು ಪತ್ರ ಬಿಡುಗಡೆ ಮಾಡಿದ್ದು, ೨೦೦೭ರಲ್ಲಿ ಬೆಂಗಳೂರಿನಲ್ಲಿ ಸಮುದಾಯದ ಭವನಕ್ಕೆ ಹೆಸರಿಡುವಾಗ ಏರ್ಪಟ್ಟ ಗೊಂದಲದ ವೇಳೆ ವೀರಶೈವ– ಲಿಂಗಾಯತ ಭವನ ಎಂದು ನಾಮಕರಣ ಮಾಡಲು ಶ್ರೀಗಳು ಸೂಚಿಸಿದ್ದರು. ಜನಾಂಗ ಸಂಘಟನೆ ಕೊರತೆಯಿಂದ ಅವನತಿಯ ದಾರಿಯಲ್ಲಿರುವಾಗ ಈ ರೀತಿ ಗೊಂದಲ ಒಳ್ಳೆಯದಲ್ಲ ಎಂದು ತಿಳಿಸಿದ್ದರು ಎಂಬುದನ್ನೂ ಉಲ್ಲೇಖಿಸಲಾಗಿದೆ.

ಈಶ್ವರ ಖಂಡ್ರೆ, ಶಾಮನೂರು ಭೇಟಿ: ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಹಾಗೂ ಕಾರ್ಯದರ್ಶಿ, ಸಚಿವ ಈಶ್ವರ ಖಂಡ್ರೆ ಮಂಗಳವಾರ ಸಿದ್ದಗಂಗಾ ಮಠಕ್ಕೆ ಭೇಟಿ ನೀಡಿ ಶ್ರೀಗಳ ಜತೆ ಮುಕ್ಕಾಲು ಗಂಟೆ ಮಾತುಕತೆ ನಡೆಸಿದರು.

ನಂತರ ಜಂಟಿ ಸುದ್ದಿಗೋಷ್ಠಿ ನಡೆಸಿದ ಇಬ್ಬರೂ ಮುಖಂಡರು, ವೀರಶೈವ–ಲಿಂಗಾಯಿತರಲ್ಲಿ ಯಾವುದೇ ಭೇದ ಭಾವ ಇಲ್ಲ ಎಂದು ಶ್ರೀಗಳು ಹೇಳಿದ್ದಾರೆ. ಸಿದ್ದಗಂಗಾ ಶ್ರೀಗಳೇ ನಮಗೆ ಸುಪ್ರೀಂ ಇದ್ದ ಹಾಗೆ. ಅವರ ಹೇಳಿಕೆಯೇ ಅಂತಿಮ. ಅವರ ನಿರ್ಧಾರವೇ ಅಂತಿಮ. ಅಖಿಲ ಭಾರತ ವೀರಶೈವ ಲಿಂಗಾಯಿತ ತೀರ್ಮಾನವೇ ಅಂತಿಮ. ಎಂ.ಬಿ.ಪಾಟೀಲರನ್ನೂ ಕರೆದು ಮಾತನಾಡುತ್ತೇನೆ. ಅವರಿಗೆ ಮನವರಿಕೆ ಮಾಡಿಕೊಡುವ ಕೆಲಸ ಆಗಲಿದೆ. ನಿರಂತರವಾಗಿ ಗೊಂದಲಕ್ಕೆ ತೆರೆ ಎಳೆಯುವ ಕೆಲಸ ಆಗುತ್ತಿದೆ. ಇದಕ್ಕೂ ರಾಜಕೀಯಕ್ಕೆ ಯಾವುದೇ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದರು.

ಅಖಿಲ ಭಾರತ ವೀರಶೈವ ಮಹಾಸಭಾಕ್ಕೆ ೧೨೫ ವರ್ಷಗಳ ಇತಿಹಾಸವಿದೆ. ಸಿದ್ದಗಂಗಾ ಶ್ರೀಗಳೂ ಅಧ್ಯಕ್ಷರಾಗಿ ಕಾರ್ಯನಿರ್ವಹಣೆ ಮಾಡಿದ ಅನುಭವವಿದೆ. ವೀರಶೈವ–ಲಿಂಗಾಯಿತ ಎರಡೂ ಒಂದೇ ಎಂದು ೨೦೧೩ರಲ್ಲಿ ಕೇಂದ್ರಕ್ಕೆ ಪ್ರಸ್ತಾವನೆ ಕಳುಹಿಸಲಾಗಿತ್ತು. ಅದಿನ್ನೂ ಅಂತಿಮಗೊಂಡಿಲ್ಲ. ಹೀಗಿರುವಾಗಲೇ ಅದು ತಿರಸ್ಕಾರವಾಗಿದೆ ಎಂದು ಹೇಳುತ್ತಿರುವುದು ಸರಿಯಲ್ಲ ಎಂದರು.

ಅಖಿಲ ಭಾರತ ವೀರಶೈವ ಮಹಾಸಭಾದ ಉದ್ದೇಶ ಎಲ್ಲರನ್ನೂ ಒಂದುಗೂಡಿಸುವುದು. ಸದ್ಯ ಎದ್ದಿರುವ ಗೊಂದಲಗಳಿಗೆ ತೆರೆ ಎಳೆಯುವ ನಿಟ್ಟಿನಲ್ಲಿಯೇ ಶ್ರೀಗಳನ್ನು ಭೇಟಿ ಮಾಡಲಾಗಿದೆ ಎಂದು ಸ್ಪಷ್ಟಪಡಿಸಿದರು.

ನಾವೆಲ್ಲಾ ಒಟ್ಟಾಗಿ ಕುಳಿತು ಮಾತನಾಡುತ್ತೇವೆ. ಎಂ.ಬಿ.ಪಾಟೀಲ್ ಅವರನ್ನೂ ಗಣನೆಗೆ ತೆಗೆದುಕೊಳ್ಳುತ್ತೇವೆ. ಶೀಘ್ರ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳುತ್ತೇವೆ. ಮುಖ್ಯಮಂತ್ರಿಗಳೂ ನಮಗೆ ಸ್ಪಂದಿಸಿದ್ದಾರೆ. ಎಲ್ಲರೂ ಒಗ್ಗೂಡಿ ಬಂದರೆ ನಿಮ್ಮ ಮನವಿ ಪುರಸ್ಕರಿಸುತ್ತೇವೆ ಎಂದಿದ್ದಾರೆ. ಇಬ್ಬರನ್ನೂ ಒಗ್ಗೂಡಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳು ಇದ್ದಾರೆ ಎಂದು ಈಶ್ವರ ಖಂಡ್ರೆ ತಿಳಿಸಿದರು.

ಇಂದು ಕಾಗದ ಪತ್ರಗಳ ಸಮಿತಿ ಸಭೆ

ಚಾಮರಾಜನಗರ,ಸೆ.೧೨–ಕರ್ನಾಟಕ ವಿಧಾನಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ ಸೆ.೧೩ರಂದು ಬೆಳಿಗ್ಗೆ ೧೧ಗಂಟೆಗೆ ಜಿಲ್ಲಾ ಪಂಚಾಯಿತಿ ಕಚೇರಿಗೆ ಭೇಟಿ ನೀಡಿ ವಾರ್ಷಿಕ ವರದಿಗಳನ್ನು ಸಲ್ಲಿಸದಿರುವ ಬಗ್ಗೆ ಜಿಪಂ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಚರ್ಚೆ ನಡೆಸಲಿದೆ.

ಸಮಿತಿ ಅಧ್ಯಕ್ಷ ಸಾ.ರಾ.ಮಹೇಶ್, ಸದಸ್ಯರಾದ ಎಂ.ಎಚ್.ಅಂಬರೀಶ್, ಶಾಮನೂರು ಶಿವಶಂಕರಪ್ಪ, ಎನ್.ವೈ.ಗೋಪಾಲಕೃಷ್ಣ, ಎ.ಎಸ್.ಪಾಟೀಲ (ನಡಹಳ್ಳಿ), ಡಿ.ಜಿ.ಶಾಂತನಗೌಡ, ಎಚ್.ವೈ. ಮೇಟಿ, ಪ್ರಿಯಕೃಷ್ಣ, ಮುನಿರತ್ನ, ಎಸ್.ಮುನಿರಾಜು, ಎಂ.ಕೃಷ್ಣಪ್ಪ, ಟಿ.ಎಚ್. ಸುರೇಶ್‌ಬಾಬು, ಎಂ. ಕೃಷ್ಣಾರೆಡ್ಡಿ, ಕೆ.ಎಸ್.ಪುಟ್ಟಣ್ಣಯ್ಯ, ಬಿ.ನಾಗೇಂದ್ರ, ಡಿ.ಯು. ಮಲ್ಲಿಕಾರ್ಜುನ, ವಿವೇಕರಾವ್ ವಸಂತರಾವ್ ಪಾಟೀಲ್, ಜಿ.ರಘು ಆಚಾರ್, ಸಚಿವಾಲಯ ಅಧಿಕಾರಿಗಳಾದ ಜಂಟಿಕಾರ್ಯದರ್ಶಿ ಮಲ್ಲಪ್ಪ ಬಿ.ಕಾಳೆ, ಉಪಕಾರ್ಯದರ್ಶಿ ಎಜಾಜ್ ಅಹಮದ್‌ಖಾನ್, ಅಧೀನ ಕಾರ್ಯದರ್ಶಿ ಕೆ.ಎಸ್.ಗಣೇಶ, ಶಾಖಾಧಿಕಾರಿ ನೂರ್ ಅಹಮದ್ ಹಾಜಿ ಸಾಹೇಬ್ ಜಮಾದಾರ್ ಭೇಟಿ ನೀಡುವರು.

ವಚನ ಸಂಪುಟ ಮಾರಾಟ

ಚಾಮರಾಜನಗರ,ಸೆ.೧೨–ಕನ್ನಡ ನಾಡಿನ ಪ್ರಥಮ ಪ್ರಜಾ ಸಾಹಿತ್ಯವಾಗಿರುವ ವಚನಗಳು ನಮ್ಮ ಪರಂಪರೆಯ ಅಪೂರ್ವ ಆಸ್ತಿ ಎನಿಸಿದೆ. ಪ್ರಸ್ತುತ ಕನ್ನಡ ಸಾಹಿತ್ಯ ಲೋಕದಲ್ಲಿ ಹತ್ತಾರು ವಚನಕಾರರ ಸಾವಿರಾರು ವಚನಗಳು ಲಭ್ಯವಿದೆ. ಇಂತಹ ವಚನಗಳು ಸಮಾಜದಲ್ಲಿ ಮಾನವೀಯ ಮೌಲ್ಯಗಳನ್ನು ಹಾಗೂ ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿಯುವಂತಹವುಗಳಾಗಿದ್ದು, ಸಮಾಜಕ್ಕೆ ಅತ್ಯಂತ ಪ್ರಸ್ತುತ ಸಾಹಿತ್ಯವಾಗಿದೆ.

ಇಂತಹ ಸಾವಿರಾರು ವಚನಗಳನ್ನು ಒಟ್ಟುಗೂಡಿಸಿ ಕನ್ನಡ ಪುಸ್ತಕ ಪ್ರಾಧಿಕಾರವು ಬಸವ ಯುಗದ ವಚನ ಮಹಾಸಂಪುಟ–೧೯೫೨ ಪುಟಗಳು ಹಾಗೂ ಬಸವೋತ್ತರ ಯುಗದ ವಚನ ಮಹಾಸಂಪುಟ–೧೫೩೬ ಪುಟಗಳನ್ನು ಹೊಂದಿದಂತೆ ೩ನೇ ಮುದ್ರಣವಾಗಿ ಎರಡು ಮಹಾಸಂಪುಟಗಳನ್ನು ಮುದ್ರಣ ಮಾಡಿಸಿ ಬಿಡುಗಡೆ ಮಾಡಿದೆ.

ಸಂಪುಟಗಳ ಒಟ್ಟಾರೆ ಖರೀದಿ ಮೌಲ್ಯ ೬೦೦ ರೂ.ಗಳು. ಈ ಸಂಪುಟಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಿಲ್ಲಾ ಕಚೇರಿಗಳಲ್ಲಿ ಮಾರಾಟಕ್ಕೆ ಲಭ್ಯವಿದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾರಿಗೆ ಬಸ್–ಆಟೋ ಮುಖಾಮುಖಿ ಡಿಕ್ಕಿ

ಮಹಿಳೆಯ ಮೂರು ಬೆರಳು ತುಂಡು; ೭ ಮಂದಿಗೆ ಗಾಯ

ಹನೂರು,ಸೆ.೧೨–ಕೆಎಸ್‌ಆರ್‌ಟಿಸಿ ಬಸ್ ಮತ್ತು ಆಟೋ ನಡುವೆ ಮುಖಾಮುಖಿ ಡಿಕ್ಕಿಯಾಗಿ ಓರ್ವ ಮಹಿಳೆಯ ೩ ಬೆರಳುಗಳು ತುಂಡಾಗಿದ್ದು, ಒಟ್ಟು ೭ ಜನರು ಗಾಯಗೊಂಡಿರುವ ಘಟನೆ ಮಲ್ಲಯ್ಯನಪುರ–ದೊಮ್ಮನಗದ್ದೆ ಮಾರ್ಗಮಧ್ಯೆ ಜರುಗಿದೆ.

ದೊಮ್ಮನಗದ್ದೆ ಗ್ರಾಮದ ಅಪ್ಪಣ್ಣ ಅವರ ಪತ್ನಿ ಚಂದ್ರಮ್ಮ (೩೦) ೩ ಬೆರಳುಗಳನ್ನು ಕಳೆದುಕೊಂಡವರು. ಅದೇ ಗ್ರಾಮದ ಅನಿತಾ(೧೮). ರಾಜಿ (೩೮), ಮುತ್ತಮ್ಮ ಕೋಂ ಲೇ.ಮರಿಸ್ವಾಮಿ (೫೦), ಲಕ್ಷ್ಮೀ ಕೋಂ ವೀರಾ (೩೫) ಮತ್ತು ಅಮ್ಮಯ್ಯ ಕೋಂ ಪೆರುಮಾಳ್ (೩೫) ಗಾಯಗೊಂಡವರು.

ಮಂಗಳವಾರ ಸಂಜೆ ಜಮೀನಿನಲ್ಲಿ ಕೆಲಸ ಮುಗಿಸಿಕೊಂಡು ದೊಮ್ಮನದ್ದೆಗೆ ಆಟೋದಲ್ಲಿ ಹಿಂದಿರುಗುತ್ತಿದ್ದರು. ಈ ವೇಳೆ ಕೆಎಸ್‌ಆರ್‌ಟಿಸಿ ಬಸ್ ಮತ್ತು ಆಟೋ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ತಕ್ಷಣ ಸ್ಥಳೀಯರು ೧೦೮ ಆಂಬುಲೆನ್ಸ್ ವಾಹನಕ್ಕೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕಾಗಮಿಸಿದ ೧೦೮ ವಾಹನದ ತುರ್ತು ವೈದ್ಯಕೀಯ ಸಹಾಯಕಿ ಶ್ರುತಿ ಮತ್ತು ವಾಹನ ಚಾಲಕ ಸದಾಶಿವಮೂರ್ತಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಕೊಳ್ಳೇಗಾಲ ಉಪವಿಭಾಗ ಆಸ್ಪತ್ರೆಗೆ ಕರೆದೊಯ್ದರು.

ಕಟ್ಟೆ ಒಡೆದು ನೀರು ಪೋಲು

ಹಳ್ಳಿಕೆರೆಯಲ್ಲಿ ರೈತರ ಪ್ರತಿಭಟನೆ

ಕೊಳ್ಳೇಗಾಲ.ಸೆ.೧೨–ತಾಲ್ಲೂಕಿನ ಮುಳ್ಳೂರು ಸಮೀಪದ ಹಳ್ಳಿಕೆರೆಯ ಕಟ್ಟೆ ಒಡೆದು ನೀರು ಪೋಲಾಗುತ್ತಿದ್ದರೂ ನೀರಾವರಿ ಇಲಾಖೆ ಅಧಿಕಾರಿಗಳು ಗಮನಹರಿಸುತ್ತಿಲ್ಲವೆಂದು ಆರೋಪಿಸಿ ಬಿಎಸ್‌ಪಿ ರಾಜ್ಯಾಧ್ಯಕ್ಷ ಎನ್.ಮಹೇಶ್ ನೇತೃತ್ವದಲ್ಲಿ ಗ್ರಾಮಸ್ಥರು ಮಂಗಳವಾರ ಸಂಜೆ ರಸ್ತೆ ತಡೆ ನಡೆಸಿದರು.

ಗ್ರಾಮದ ಹಳ್ಳಿಕೆರೆಯ ಬಳಿ ಮಹೇಶ್‌ರವರು ತೆರಳಿ ಕೆರೆಯನ್ನು ವೀಕ್ಷಣೆ ಮಾಡಿದ ನಂತರ ಗ್ರಾಮದ ರೈತರೊಡನೆ ರಸ್ತೆ ತಡೆದು ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳ ವಿರುದ್ಧ ಘೋಷಣೆ ಕೂಗಿದರಲ್ಲದೆ, ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ನೀರು ಪೋಲಾಗುವುದನ್ನು ತಡೆಯಬೇಕು ಎಂದು ಆಗ್ರಹಿಸಿದರು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಎನ್.ಮಹೇಶ್, ಹಳ್ಳಿಕೆರೆ ಸುಮಾರು ೨೦೦ ಎಕರೆ ವಿಸ್ತೀರ್ಣವಿದ್ದು, ಸದರಿ ಕೆರೆಯಿಂದ ೫೦೦ ಎಕರೆಗಳಿಗೂ ಹೆಚ್ಚು ಪ್ರದೇಶಕ್ಕೆ ನೀರುಣಿಸುತ್ತದೆ. ಈ ಕೆರೆಯ ಕಟ್ಟೆ ಒಡೆದು ಕೆರೆಯಲ್ಲಿ ತುಂಬಿದ್ದ ನೀರೆಲ್ಲಾ ಹರಿದು ಕೆರೆ ಬರಿದಾಗುವ ಹಂತ ತಲುಪಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಇತ್ತ ತಿರುಗಿಯೂ ನೋಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಖಂಡರಾದ ಮುಳ್ಳೂರು ಪ್ರಭು, ಜಕಾವುಲ್ಲಾ, ಸೈಮನ್‌ರಾಜ್, ಜಗದೀಶ್, ರಂಗಸ್ವಾಮಿ ಶಂಕನಪುರ ರಾಜು, ಪ್ರಭುಸ್ವಾಮಿ ತಿ.ನರಸೀಪುರ, ಹನುಮಂತ, ಮಾಂಬಳ್ಳಿ ಶಿವಕುಮಾರ್, ಸೋಮಣ್ಣ ಹಾಗೂ ಗ್ರಾಮದ ಹಲವಾರು ರೈತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಸರ್ಕಾರಿ ಜಮೀನು ಖಾತೆ ಮಾಡಿಕೊಟ್ಟ ಪ್ರಕರಣ

ಮೂವರು ಅಮಾನತು; ಒಬ್ಬರಿಗೆ ನೋಟಿಸ್ ಜಾರಿ

ಬೇಲೂರು ಸರ್ಕಾರಿ ಪದವಿ ಪೂರ್ವ ಕಾಲೇಜು ಮುಂಭಾಗದ ಆಟದ ಮೈದಾನ.

ಬೇಲೂರು,ಸೆ.೧೨–ಪಟ್ಟಣದ ಹೃದಯ ಭಾಗದಲ್ಲಿನ ಹಾಗೂ ರಾಷ್ಟ್ರೀಯ ಹೆದ್ದಾರಿ ಬದಿಯ ಕೋಟ್ಯಂತರ ರೂ. ಬೆಲೆ ಬಾಳುವ ೧.೦೯ ಎಕರೆಯನ್ನು ಖಾಸಗಿ ವ್ಯಕ್ತಿಗೆ ಖಾತೆ ಮಾಡಿಕೊಟ್ಟಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಹಾಸನ ಜಿಲ್ಲಾಧಿಕಾರಿಗಳು ಕಂದಾಯ ಇಲಾಖೆಯ ಮೂವರು ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟಿದ್ದು, ಒಬ್ಬರಿಗೆ ನೋಟೀಸ್ ಜಾರಿ ಮಾಡಿದ್ದಾರೆ.

ಸರ್ವೆ ನಂ.೧೧೭/೪ರಲ್ಲಿನ ೧.೦೯ ಎಕರೆ ಸರ್ಕಾರಿ ಜಮೀನನ್ನು ಕಾನೂನು ಬಾಹಿರವಾಗಿ ಖಾಸಗಿ ವ್ಯಕ್ತಿಗೆ ಖಾತೆ ಮಾಡಿಕೊಟ್ಟಿರುವ ಬಗ್ಗೆ ಜಿಲ್ಲಾಧಿಕಾರಿಗಳ ಕಚೇರಿಯಿಂದ ನೇಮಿಸಲಾಗಿದ್ದ ತನಿಖಾ ತಂಡವು ವರದಿ ನೀಡಿದ ಹಿನ್ನೆಲೆಯಲ್ಲಿ ಬೇಲೂರು ತಾಲ್ಲೂಕು ಕಚೇರಿಯ ರಾಜಸ್ವನಿರೀಕ್ಷಕ ಕೆ.ಪಿ.ಲಿಂಗರಾಜು, ದ್ವಿತೀಯ ದರ್ಜೆ ಸಹಾಯಕ ವಿ.ಆರ್.ಲೋಕೇಶ್ ಮತ್ತು ಸನ್ಯಾಸಿಹಳ್ಳಿ ಗ್ರಾಮ ಲೆಕ್ಕಿಗ ಎನ್.ಸುಹಾಸ್ ಅವರನ್ನು ಅಮಾನತುಗೊಳಿಸಿ ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

ಹಾಗೆಯೇ ಗ್ರಾಮ ಲೆಕ್ಕಿಗರಾದ ಕೆ.ಸಿ.ವಸಂತ ಅವರಿಗೆ ನೋಟಿಸ್ ನೀಡಿದ್ದು, ೩ ದಿನಗಳಲ್ಲಿ ಸಮಜಾಯಿಷಿ ನೀಡಲು ಸೂಚಿಸಲಾಗಿದೆ.

ಸರ್ಕಾರಿ ಪದವಿ ಪೂರ್ವ ಕಾಲೇಜು ಮುಂಭಾಗದ ಈ ಆಸ್ತಿಗೆ ಸಂಬಂಧಿಸಿದಂತೆ ೧೯೯೩–೯೪ರಿಂದ ೨೦೧೩ರವರೆಗೆ ವಿವಿಧ ಹಂತದ ನ್ಯಾಯಾಲಯದ ಆದೇಶಗಳು ಮತ್ತಿತರ ದಾಖಲೆಗಳನ್ನು ಪರಿಶೀಲಿಸದೆ ಚನ್ನಕೇಶವಶೆಟ್ಟಿ ಬಿನ್ ಪುಟ್ಟ ಬಸವಪ್ಪ ಅವರಿಗೆ ಮಾಡಿಕೊಡುವ ದೃಷ್ಟಿಯಿಂದ ಮತ್ತು ಸದರಿ ಪ್ರದೇಶವು ಸರ್ಕಾರಿ ಜಾಗ ಎಂದು ತಿಳಿದಿದ್ದರೂ ಕಾನೂನು ಬಾಹಿರವಾಗಿ ಖಾತೆ ಬದಲಾವಣೆ ಮಾಡಿರುವುದು ತನಿಖೆಯಲ್ಲಿ ಕಂಡುಬಂದಿದೆ. ಈ ಕಾರಣದಿಂದಲೇ ಇವರನ್ನು ಅಮಾನತು ಮಾಡಲಾಗಿದೆ ಎನ್ನಲಾಗಿದೆ.

ಆತ್ಮಹತ್ಯೆ ತಡೆ ದಿನಾಚರಣೆ: ಜಾಗೃತಿ ಜಾಥಾ

ಚಾಮರಾಜನಗರ,ಸೆ.೧೨–ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ನಗರದಲ್ಲಿ ಮಂಗಳವಾರ 'ವಿಶ್ವ ಆತ್ಮಹತ್ಯೆ ತಡೆ ದಿನಾಚರಣೆ' ಅಂಗವಾಗಿ ಜಾಗೃತಿ ಜಾಥಾ ನಡೆಸಲಾಯಿತು.

ನಗರದ ಚಾಮರಾಜೇಶ್ವರ ದೇವಾಲಯದ ಬಳಿ ಜಿಪಂ ಅಧ್ಯಕ್ಷ ಎಂ.ರಾಮಚಂದ್ರ ಹಸಿರು ನಿಶಾನೆ ತೋರುವ ಮೂಲಕ ಜಾಗೃತಿ ಜಾಥಾಗೆ ಚಾಲನೆ ನೀಡಿದರು.

ಇದೇ ವೇಳೆ ಮಾತನಾಡಿದ ರಾಮಚಂದ್ರ ಅವರು, ಪ್ರಸ್ತುತ ದಿನಗಳಲ್ಲಿ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗತೊಡಗಿವೆ. ಆತ್ಮಹತ್ಯೆಯಿಂದ ಸಮಸ್ಯೆ ಪರಿಹಾರವಾಗದು. ಜೀವನದಲ್ಲಿ ಎದುರಾಗುವ ಸಂಕಷ್ಟಗಳನ್ನು ಧೈರ್ಯದಿಂದ ಎದುರಿಸಬೇಕು. ಯಾವುದೇ ಕಾರಣಕ್ಕೂ ಧೃತಿಗೆಡಬಾರದು ಎಂದರು.

ಜನರ ಆರೋಗ್ಯ ಸಮಸ್ಯೆಗಳಿಗೆ ಸಾಕಷ್ಟು ಪರಿಹಾರ ನೀಡುವ ಸೌಲಭ್ಯಗಳನ್ನು ಒದಗಿಸಲಾಗಿದೆ. ಎಲ್ಲ ಬಗೆಯ ಚಿಕಿತ್ಸೆ, ಔಷಧಿ ಉಪಚಾರಕ್ಕೆ ಹೆಚ್ಚಿನ ನೆರವನ್ನು ಸರ್ಕಾರ ನೀಡುತ್ತಿದೆ. ಆರೋಗ್ಯ ಸೇವೆಗಳನ್ನು ಜನರು ಸದುಪಯೋಗ ಮಾಡಿಕೊಳ್ಳಬೇಕು ಎಂದು ರಾಮಚಂದ್ರ ತಿಳಿಸಿದರು.

ಜಿಪಂ ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷ ಕೆ.ಪಿ.ಸದಾಶಿವಮೂರ್ತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಎಚ್.ಪ್ರಸಾದ್, ಡಾ.ಅನಿಲ್‌ಕುಮಾರ್, ಡಾ.ರಾಜು ಇತರರು ಹಾಜರಿದ್ದರು.

ಮೃಗಾಲಯದಿಂದ ದತ್ತು ಸ್ವೀಕಾರ

ಮೈಸೂರು,ಸೆ.೧೨– ಮೃಗಾಲಯದ ಪ್ರಾಣಿಗಳ ದತ್ತು ಸ್ವೀಕಾರ ಯೋಜನೆಯಡಿ ಮೈಸೂರಿನ ಸುಜಾತ ಆರ್.ಶೆಟ್ಟಿ–ರೋಡ್ ರಿಂಗಡ್ ಪ್ಯಾರಕೀಟ್, ಪಿ.ಆರ್.ಶೆಟ್ಟಿ ಮೆಮೋರಿಯಲ್ ಟ್ರಸ್ಟ್–ಮಂದರಿನ್ ಡಕ್, ಶೆಟ್ಟಿ ಟ್ಯುಷನ್ ಸೆಂಟರ್–ಲವ್‌ಬರ್ಡ್, ವಿಲ್ಲೆಮ್ ಸಹದೇವ್–ಎರಡು ನವಿಗಳನ್ನು ಒಂದು ವರ್ಷದ ಅವಧಿಗೆ ದತ್ತು ಪಡೆದಿದ್ದಾರೆ ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಸಿ.ರವಿ ತಿಳಿಸಿದ್ದಾರೆ.

ಗೌರಿ ಹತ್ಯೆ: ವಿಶ್ವಸಂಸ್ಥೆ ಖಂಡನೆ

ಜಿನಿವಾ,ಸೆ.೧೨– ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆಯನ್ನು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮುಖ್ಯಸ್ಥ ಝೈದ್ ರಾದ್ ಅಲ್ ಹುಸೇನ್ ಖಂಡಿಸಿದ್ದಾರೆ.

ಇಲ್ಲಿ ನಡೆದ ಮಾನವ ಹಕ್ಕುಗಳ ಪರಿಷತ್ ಸಭೆಯಲ್ಲಿ ಈ ಬಗ್ಗೆ ಪ್ರಸ್ತಾಪಿಸಿದ ಅವರು, ಗೌರಿ ಲಂಕೇಶ್ ಸಂಪ್ರದಾಯವಾದಿಗಳು ಮತ್ತು ದ್ವೇಷಕಾರುವವರ ವಿರುದ್ಧ ಅವಿರತ ಹೋರಾಟ ನಡೆಸಿದ್ದರು ಎಂದು ಹೇಳಿದ್ದಾರೆ.

ಮೂಲಭೂತವಾದ, ಮಾನವ ಹಕ್ಕುಗಳ ಬಗ್ಗೆ ಮಾತನಾಡುವವರಿಗೆ ಬೆದರಿಕೆ ಹಾಕಲಾಗುತ್ತಿದೆ. ಇದು ನಿಜಕ್ಕೂ ಕಳವಳಕಾರಿ ಸಂಗತಿ. ಭಾರತದಲ್ಲಿ ಗೋ ರಕ್ಷಣೆ ಕುರಿತ ವಿದ್ಯಮಾನಗಳ ಬಗ್ಗೆಯೂ ಅವರು ಕಳವಳ ವ್ಯಕ್ತಪಡಿಸಿದರು.

ಗೌರಿ ಲಂಕೇಶ್ ಹತ್ಯೆ ಪ್ರಕರಣ

ರಾಜರಾಜೇಶ್ವರಿ ನಗರ ಠಾಣೆ ಸಿಬ್ಬಂದಿ ಕರ್ತವ್ಯಲೋಪ

ವಿಶೇಷ ತನಿಖಾ ತಂಡದ ಅಧಿಕಾರಿಗಳ ಬೇಸರ

ಬೆಂಗಳೂರು,ಸೆ.೧೨– ಗೌರಿ ಲಂಕೇಶ್ ಹತ್ಯೆ ಸ್ಥಳದಲ್ಲಿ ಸಾಕ್ಷ್ಯಗಳನ್ನು ಸಂರಕ್ಷಿಸದ ರಾಜರಾಜೇಶ್ವರಿ ನಗರ ಠಾಣೆ ಪೊಲೀಸ್ ಸಿಬ್ಬಂದಿ ಕರ್ತವ್ಯಲೋಪ ಎಸಗಿರುವುದರಿಂದಲೇ ಹಂತಕರ ಬಗ್ಗೆ ಸಣ್ಣ ಸುಳಿವೂ ದೊರಕದಂತಾಗಿದೆ ಎಂದು ವಿಶೇಷ ತನಿಖಾ ತಂಡದ ಅಧಿಕಾರಿಗಳು ಬೇಸರ ವ್ಯಕ್ತಪಡಿಸಿದ್ದಾರೆ.

ರಾಜರಾಜೇಶ್ವರಿ ನಗರದ ಮನೆಯ ಅಂಗಳದಲ್ಲೇ ಸೆ.೫ರ ರಾತ್ರಿ ೮ ಗಂಟೆಗೆ ಗೌರಿ ಲಂಕೇಶ್ ಹತ್ಯೆ ನಡೆದ ಬಳಿಕ ಶವವಿದ್ದ ಸ್ಥಳದಲ್ಲಿ ಆರೋಪಿಗಳು ಓಡಾಡಿದ್ದ ಜಾಗದಲ್ಲಿ ಬೇರೆ ಯಾರೂ ಕಾಲಿಡದಂತೆ ಕಾವಲು ಕಾಯ್ದು ಸಾಕ್ಷ್ಯಗಳನ್ನು ಸಂರಕ್ಷಿಸಬೇಕಿತ್ತು. ಆದರೆ, ಈ ಕೆಲಸದಲ್ಲಿ ಸ್ಥಳೀಯ ಸಿಬ್ಬಂದಿ ವಿಫಲರಾಗಿದ್ದಾರೆ. ಅದರಿಂದ ಎಸ್ಐಟಿ ಮುಖ್ಯಸ್ಥ ಬಿ.ಕೆ.ಸಿಂಗ್ ಅಸಮಾಧಾನಗೊಂಡಿದ್ದು, ಕರ್ತವ್ಯಲೋಪ ಎಸಗಿದ ಸಿಬ್ಬಂದಿಯ ಪಟ್ಟಿ ನೀಡುವಂತೆ ಸೂಚಿಸಿದ್ದಾರೆ.

ಅರ್ಧದಷ್ಟು ಸಾಕ್ಷ್ಯ ಹತ್ಯೆಯಾದ ಸ್ಥಳದಲ್ಲೇ ಇರುತ್ತವೆ. ಅವುಗಳನ್ನು ರಕ್ಷಿಸುವುದು ಪೊಲೀಸ್ ಅಧಿಕಾರಿಯ ಕರ್ತವ್ಯ. ಸಿಬ್ಬಂದಿ ನಿಯೋಜಿಸಿ, ಆ ಸ್ಥಳದಿಂದ ೨೦೦ ಮೀಟರ್ ಸುತ್ತ ಯಾರೂ ಓಡಾಡದಂತೆ ನೋಡಿಕೊಳ್ಳಬೇಕು. ಹತ್ಯೆ ನಡೆದ ಸ್ಥಳದಲ್ಲಿನ ಪ್ರತಿ ಇಂಚು ಸಹ ಮಹತ್ವ ಪಡೆಯುತ್ತದೆ. ಈ ನಿಯಮವನ್ನು ಸ್ಥಳೀಯ ಪೊಲೀಸರು ಪಾಲಿಸಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಗೌರಿ ಅವರ ಶವದ ಬಳಿ ಪೊಲೀಸರೇ ಬೇಕಾಬಿಟ್ಟಿಯಾಗಿ ಓಡಾಡಿದ್ದಾರೆ. ಶವ ನೋಡಲು ಸ್ಥಳದಲ್ಲಿ ಸೇರಿದ್ದ ಸಾರ್ವಜನಿಕರು ಎಲ್ಲೆಂದರಲ್ಲಿ ಸುತ್ತಾಡಿದ್ದಾರೆ. ಅವರು ಆ ರೀತಿ ಮಾಡದಿದ್ದರೆ, ಸ್ಥಳದಲ್ಲಿ ಸಾಕಷ್ಟು ಸುಳಿವು ಸಿಗುತ್ತಿದ್ದವು. ಈಗ ಕೃತ್ಯದ ಸ್ಪಷ್ಟತೆಯೇ ಗೊತ್ತಾಗುತ್ತಿಲ್ಲ. ಮುಂದೆ ಆರೋಪಿಗಳು ಸಿಕ್ಕರೂ ಅವರು ಖುಲಾಸೆಯಾಗುವ ಸಾಧ್ಯತೆ ಹೆಚ್ಚಿದೆ ಎಂದು ತಿಳಿಸಿದರು.

ಸುಳಿವು ನೀಡದ ಚಕ್ರ: ಕೃತ್ಯ ಎಸಗಿದ ಬಳಿಕ ಆರೋಪಿಗಳು ಪರಾರಿಯಾಗಲು ಬಳಸಿದ್ದಾರೆ ಎನ್ನಲಾದ ವಾಹನದ ಮೂಲಕ ಹಂತಕರ ಸುಳಿವು ಪತ್ತೆಗೆ ಎಸ್ಐಟಿ ಅಧಿಕಾರಿಗಳು ಭಾನುವಾರ ಪ್ರಯತ್ನಿಸಿದರು. ನಗರಕ್ಕೆ ಬಂದಿದ್ದ ಹೈದರಾಬಾದ್ ವಿಧಿವಿಜ್ಞಾನ ಪ್ರಯೋಗಾಲಯದ ಸಿಬ್ಬಂದಿ, ವಾಹನಗಳ ಚಕ್ರದ ಓಡಾಟ ಪತ್ತೆ ಉಪಕರಣದ ಮೂಲಕ ಘಟನಾ ಸ್ಥಳದಲ್ಲಿ ಪರಿಶೀಲನೆ ನಡೆಸಿದರು. ಗೌರಿ ಅವರ ನಿವಾಸದ ಗೇಟಿನಿಂದ ಆರಂಭಗೊಂಡ ಪರಿಶೀಲನೆ ೧೦೦ ಮೀಟರ್ ಅಂತರದಲ್ಲಿ ನಿಂತು ಹೋಯಿತು.

ವಾಹನಗಳ ಚಕ್ರದ ಸುಳಿವಿನ ಮೂಲಕ ಆರೋಪಿಗಳನ್ನು ಪತ್ತೆ ಹಚ್ಚಿದ ಉದಾಹರಣೆಗಳಿವೆ. ಈ ಪ್ರಕರಣದಲ್ಲೂ ಅಂಥ ಸುಳಿವಿಗಾಗಿ ಹುಡುಕಾಟ ನಡೆಸಿದೆವು. ಯಾವುದೇ ಪ್ರಯೋಜನವಾಗಿಲ್ಲ ಎಂದು ಎಸ್ಐಟಿ ಅಧಿಕಾರಿ ತಿಳಿಸಿದರು.

ಹೆದ್ದಾರಿಗಳ ೧,೬೦೦ ಕ್ಯಾಮೆರಾ ಡಿವಿಆರ್ ವಶಕ್ಕೆ: ಹಂತಕರ ಜಾಡು ಪತ್ತೆಗಾಗಿ ಎಸ್ಐಟಿ ಅಧಿಕಾರಿಗಳು, ಬೆಂಗಳೂರು ಸುತ್ತಲಿನ ಹೆದ್ದಾರಿಗಳ ೧,೬೦೦ ಸಿಸಿಟಿವಿ ಕ್ಯಾಮೆರಾಗಳ ಡಿಜಿಟಲ್ ವಿಡಿಯೊ ರೆಕಾರ್ಡರ್ (ಡಿವಿಆರ್) ಉಪಕರಣಗಳನ್ನು ಸುಪರ್ದಿಗೆ ಪಡೆದಿದ್ದಾರೆ.

ನಗರದಿಂದ ಹೊರಹೋಗಲು ಅನುಕೂಲವಾಗಿರುವ ಹೊಸಕೋಟೆ, ನೆಲಮಂಗಲ, ದೇವನಹಳ್ಳಿ, ಮೈಸೂರು, ತುಮಕೂರು, ಕನಕಪುರ ರಸ್ತೆಗಳಲ್ಲಿರುವ ಟೋಲ್ ಗೇಟ್‌ಗಳಿಗೆ ಭಾನುವಾರ ಭೇಟಿ ನೀಡಿದ್ದ ಅಧಿಕಾರಿಗಳ ತಂಡ ಡಿವಿಆರ್ ಉಪಕರಣ ಸಂಗ್ರಹಿಸಿತು.

ಕೃತ್ಯ ಎಸಗಿದ ನಂತರ ಆರೋಪಿಗಳು, ಹೆದ್ದಾರಿಗಳ ಮೂಲಕ ಪರಾರಿಯಾಗಿರುವ ಅನುಮಾನವಿದೆ. ಎಲ್ಲ ಟೋಲ್ ಗೇಟ್‌ಗಳ ಕ್ಯಾಮೆರಾ ದೃಶ್ಯಗಳನ್ನು ವೀಕ್ಷಿಸುತ್ತಿದ್ದೇವೆ. ಇದುವರೆಗೂ ಹಂತಕರ ಸುಳಿವು ಸಿಕ್ಕಿಲ್ಲ ಎಂದು ಎಸ್ಐಟಿ ಹಿರಿಯ ಅಧಿಕಾರಿ ತಿಳಿಸಿದರು.

ಪರಾರಿಯಾಗಲು ಆರೋಪಿಗಳು ಯಾವ ವಾಹನ ಬಳಸಿದ್ದಾರೆ ಎಂಬ ಬಗ್ಗೆ ನಿಖರ ಮಾಹಿತಿ ಸಿಕ್ಕಿಲ್ಲ. ಕೆಲ ಪ್ರತ್ಯಕ್ಷದರ್ಶಿಗಳು ಬೈಕ್ ಎನ್ನುತ್ತಿದ್ದು, ಇನ್ನು ಹಲವರು ಕಾರು ಎನ್ನುತ್ತಿದ್ದಾರೆ. ಹೀಗಾಗಿ ಅನುಮಾನಾಸ್ಪದ ಕಾರು ಹಾಗೂ ಬೈಕ್‌ಗಳ ಬಗ್ಗೆ ನಿಗಾ ಇಡುತ್ತಿದ್ದೇವೆ. ಹೆದ್ದಾರಿಗಳ ಕ್ಯಾಮೆರಾ ದೃಶ್ಯಗಳಲ್ಲೂ ಅಂಥ ವಾಹನಗಳನ್ನು ಪತ್ತೆ ಮಾಡುತ್ತಿದ್ದೇವೆ ಎಂದು ವಿವರಿಸಿದರು.

ನಿವಾಸಿಗಳ ವಾಹನ ಪರಿಶೀಲನೆ: ಗೌರಿ ಲಂಕೇಶ್ ವಾಸವಿದ್ದ ರಾಜರಾಜೇಶ್ವರಿ ನಗರದ ಮನೆಯ ಅಕ್ಕಪಕ್ಕದಲ್ಲಿ ವಾಸವಿರುವ ವ್ಯಕ್ತಿಗಳ ಕಾರು ಹಾಗೂ ಬೈಕ್‌ಗಳನ್ನು ಎಸ್ಐಟಿ ಅಧಿಕಾರಿಗಳು ಸೋಮವಾರ ಪರಿಶೀಲನೆ ನಡೆಸಿದರು. ನಾಲ್ವರು ಇನ್‌ಸ್ಪೆಕ್ಟರ್‌ಗಳನ್ನು ಒಳಗೊಂಡ ಡಿವೈಎಸ್ಪಿ ನೇತೃತ್ವದ ತಂಡ, ಪ್ರತಿಯೊಂದು ಮನೆಗೂ ಭೇಟಿ ನೀಡಿ ಮಾಹಿತಿ ಕಲೆಹಾಕಿತು. ಕಾರು, ಬೈಕ್‌ಗಳ ನೋಂದಣಿ ಸಂಖ್ಯೆ ಬರೆದು ಕೊಂಡು ಅವುಗಳ ಪರಿಶೀಲನೆ ನಡೆಸಿದೆ.